**ಕರ್ನಾಟಕ ವಿಧಾನ ಪರಿಷತ್ತು**

<table>
<tr><td colspan="2">ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:</td><td>1024</td></tr>
<tr><td colspan="2">ಮಾನ್ಯ ಸದಸ್ಯರ ಹೆಸರು</td><td>ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)</td></tr>
<tr><td colspan="2">ಉತ್ತರಿಸುವ ಸಚಿವರು</td><td>ಉನ್ನತ ಶಿಕ್ಷಣ ಸಚಿವರು</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>23.02.2024</td></tr>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಅಂಬಿಗರ ಚೌಡಯ್ಯನವರ ಅಧ್ಯಯನ ಪೀಠವನ್ನು ಯಾವಾಗ ಸ್ಥಾಪನೆ ಮಾಡಲಾಯಿತು ಮತ್ತು ಈ ಪೀಠಕ್ಕೆ ಇದುವರೆವಿಗೂ ಒದಗಿಸಿದ ಅನುದಾನವೆಷ್ಟು;</td><td rowspan="2">ಅಂಬಿಗರ ಚೌಡಯ್ಯನವರ ಅಧ್ಯಯನ ಪೀಠವನ್ನು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಮತ್ತು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ;
<table>
<tr><th>ವಿಶ್ವವಿದ್ಯಾಲಯ</th><th>ಸ್ಥಾಪನೆಯ ವರ್ಷ</th><th>ಇದುವರೆವಿಗೂ ಒದಗಿಸಿದ ಅನುದಾನ</th><th>ಅನುದಾನ ವೆಚ್ಚ ಮಾಡಿದ ಕಾರ್ಯಕ್ರಮಗಳ ವಿವರ</th></tr>
<tr><td>ಗುಲ್ಬರ್ಗಾ ವಿಶ್ವವಿದ್ಯಾಲಯ</td><td>2007-08</td><td>1. ರೂ 50.00 ಲಕ್ಷ ಕಾರ್ಪಸ್ ಫಂಡ್<br>2. ರೂ. 75.00 ಲಕ್ಷ ಕಟ್ಟಡ ನಿರ್ಮಾಣಕ್ಕಾಗಿ</td><td>ಸದರಿ ಅನುದಾನವನ್ನು Fixed Deposit (ನಿಶ್ಚಿತ ಠೇವಣಿ) ಮಾಡಿ ಆಕರಿಸುವ ಬಡ್ಡಿಯಲ್ಲಿ ಅಧ್ಯಯನ ಪೀಠಗಳ ಕಾರ್ಯ ಚಟುವಟಿಕೆಗಳನ್ನು ಮಾಡಲಾಗುತ್ತಿದೆ.</td></tr>
<tr><td>ಮಂಗಳೂರು ವಿಶ್ವವಿದ್ಯಾಲಯ</td><td>2007-08</td><td>ರೂ. 50.00 ಲಕ್ಷ</td><td>ಕಾರ್ಯಕ್ರಮಗಳ ಜೊತೆಗೆ ಅಧ್ಯಯನ ಪೀಠದ ಸಂಶೋಧನೆ ಸಹಾಯಕರ ಸಂಭಾವನೆ ಮತ್ತು ಕಛೇರಿ ವೆಚ್ಚ, ಕ್ಯಾಮೆರಾ, ರೆಕಾರ್ಡರ್, ಪೀಠೋಪಕರಣ, ಕಂಪ್ಯೂಟರ್ ಇತ್ಯಾದಿಗಳ ಖರೀದಿಗೆ ಅನುದಾನದ ಮೊತ್ತವನ್ನು ಬಳಸಲಾಗಿದೆ.</td></tr>
</table></td></tr>
<tr><td>(ಆ)</td><td>ಸದರಿ ಅನುದಾನವನ್ನು ಯಾವ ಯಾವ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ;</td></tr>
<tr><td>(ಇ)</td><td>ಈ ಪೀಠದಿಂದ ಇದುವರೆವಿಗೂ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ವಿವರ ಒದಗಿಸುವುದು ಮತ್ತು ಈ ಪೀಠದಿಂದ ಮುಂದಿನ ದಿನಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;</td><td>ಗುಲ್ಬರ್ಗಾ ವಿಶ್ವವಿದ್ಯಾಲಯ ಮತ್ತು ಮಂಗಳೂರು ವಿಶ್ವವಿದ್ಯಾಲಯವು ಈ ಪೀಠದಿಂದ ಇದುವರೆವಿಗೂ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ;<br><br><u>ಗುಲ್ಬರ್ಗಾ ವಿಶ್ವವಿದ್ಯಾಲಯ:</u><br><br>1. ಪ್ರತಿ ವರ್ಷ ಮೂರು ತಿಂಗಳಿಗೊಮ್ಮೆ ಒಂದು ವಿಶೇಷ ಉಪನ್ಯಾಸ ನಡೆಸಲಾಗುತ್ತಿದೆ.<br>2. ಒಂದು ರಾಜ್ಯ ಮಟ್ಟದ ವಿಚಾರ ಸಂಕೀರ್ಣ ನಡೆಸಲಾಗುತ್ತಿದೆ.<br>3. ಬಸವಕಲ್ಯಾಣದ ಕನ್ನಡ ಎಂ.ಎ ಕೋರ್ಸಿನಲ್ಲಿ ಅಂಬಿಗರ ಚೌಡಯ್ಯನವರ ವಚನಗಳ ವಿಶೇಷ ಅಧ್ಯಯನ ಪತ್ರಿಕೆ ಅನುಷ್ಠಾನಗೊಳಿಸಲಾಗಿದೆ.<br>4. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ವಿಶೇಷ ಉಪನ್ಯಾಸ ನಡೆಸಿಕೊಂಡು ಬರಲಾಗುತ್ತಿದೆ.<br>5. ಮುಂದುವರೆದು ಅಂಬಿಗರ ಚೌಡಯ್ಯನವರ ಕನ್ನಡ ಪುಸ್ತಕದ ಅನುವಾದವನ್ನು ಇಂಗ್ಲೀಷ್ ಭಾಷೆಯಲ್ಲಿ ಭಾಷಾಂತರಿಸಲು ಕ್ರಮ ವಹಿಸಲಾಗಿದೆ. (ಸಂಪೂರ್ಣ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)</td></tr>
</table>

| | | |
|---|---|---|
| | | **ಮಂಗಳೂರು ವಿಶ್ವವಿದ್ಯಾಲಯ:**<br><br>2012-2024 ರವರೆಗೆ ಮಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ವಿವಿಧ ಕಾಲೇಜುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಕೊಡಗು ಜಿಲ್ಲೆಯಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ;<br><br>1. ವಿಶೇಷ ಉಪನ್ಯಾಸ: 52<br>2. ಆಕಾಶವಾಣಿ ಉಪನ್ಯಾಸ ಮಾಲಿಕೆ: 7<br>3. ಪುಸ್ತಕ ಪ್ರಕಟಣೆ: 5<br>4. ವಿಚಾರ ಸಂಕಿರಣ: 3<br>5. ನಂಬಿಗರ ಅಂಬಿಗ ನಾಟಕ ಪ್ರದರ್ಶನ: 4<br>6. ವಿದ್ಯಾರ್ಥಿ ಉಪನ್ಯಾಸ ಸ್ಪರ್ಧೆ: 4<br>7. ವಚನ ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮ: 1<br>8. ಮೀನುಗಾರರ ಕುರಿತ ಕ್ಷೇತ್ರಕಾರ್ಯ ನಡೆಸಲಾಗಿದೆ.<br>9. 2024-25ನೇ ಶೈಕ್ಷಣಿಕ ವರ್ಷದಲ್ಲಿ 10 ವಿಶೇಷ ಉಪನ್ಯಾಸ, 1 ಉಪನ್ಯಾಸ ಸ್ಪರ್ಧೆ ಕ್ಷೇತ್ರಕಾರ್ಯ, ಪುಸ್ತಕ ಪ್ರಕಟಣೆ, ಸಂಶೋಧನಾತ್ಮಕ ಅಧ್ಯಯನ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ. (ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿರಿಸಿದೆ) |
| (ಈ) | ಕಳೆದ ಅಧಿವೇಶನದಲ್ಲಿ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಗುವುದೆಂದು ಸರ್ಕಾರವು ಭರವಸೆಯನ್ನು ನೀಡಿದ್ದು, ಯಾವ ಕಾಲಮಿತಿಯಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುವುದು; | ಸುತ್ತೋಲೆ ಸಂ. ಕಸಂವಾಪ್ರ/564/ಕಸಧ/2012, ದಿನಾಂಕ:11.06.2021 ರಲ್ಲಿ ಸರ್ಕಾರದ/ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯವು SLP (Civil) No. 8519/2006 ಪ್ರಕರಣದಲ್ಲಿ ದಿನಾಂಕ:18.01.2013ರಂದು ನೀಡಿದ ತೀರ್ಪಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆ ಪುತ್ಥಳಿ ಸ್ಥಾಪಿಸಲು ಸರ್ಕಾರವು ಅನುಮತಿ ನೀಡುವುದನ್ನು ನಿರ್ಬಂಧಿಸಿರುತ್ತದೆ.<br><br>ಆದಾಗ್ಯೂ ಪ್ರಸ್ತುತ ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ವಯ ಹಾಗೂ ಸ್ಥಳಾವಕಾಶದ ಲಭ್ಯತೆಯನ್ನಾಧರಿಸಿ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು. |
| (ಉ) | ಕಲಬುರಗಿಯಲ್ಲಿ ಅಂಬಿಗರ ಚೌಡಯ್ಯ ಅಧ್ಯಯನ ಪೀಠದಿಂದ ಒಂದು ಭವನವನ್ನು ನಿರ್ಮಾಣ ಮಾಡಲಾಗಿದ್ದು, ಈ ಭವನವನ್ನು ಬಳಕೆ ಮಾಡಿಕೊಳ್ಳದೇ ಈ ಭವನ ಬೀದಿ ನಾಯಿಗಳ ಅವಾಸ ಸ್ಥಾನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಭವನದ ದುಸ್ಥಿತಿಗೆ ಮತ್ತು ಸದ್ಬಳಕೆ ಮಾಡದಿರುವ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು? | ಅಂಬಿಗರ ಚೌಡಯ್ಯ ಅಧ್ಯಯನ ಪೀಠದಿಂದ ನಿರ್ಮಾಣವಾಗಿರುವ ಭವನವು ಗುಲ್ಬರ್ಗಾ ವಿಶ್ವವಿದ್ಯಾಲಯದ ಆವರಣದೊಳಗಿದ್ದು, ವಿಶ್ವವಿದ್ಯಾಲಯವು ಸದರಿ ಭವನವನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದ್ದು, ಉದ್ದೇಶಿತ ಕಾರ್ಯ ಚಟುವಟಿಕೆಗಳಿಗಾಗಿಯೇ ಉಪಯೋಗಿಸಲಾಗುತ್ತಿದೆ. |

ಸಂಖ್ಯೆ: ಇಡಿ 27 ಯುಜಿವಿ 2024

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

## ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠದ ಆಶ್ರಯದಲ್ಲಿ ನಿರ್ವಹಿಸಿದ ವಿಚಾರ ಸಂಕಿರಣ, ಸಮ್ಮೇಳನ ಹಾಗೂ ಕಾರ್ಯಾಗಾರಗಳ ವಿವರ

(೨೦೧೪-೧೫ ರಿಂದ ೨೦೨೩-೨೪ರ ಶೈಕ್ಷಣಿಕ ವರ್ಷದವರೆಗೆ)

| | | |
|---|---|---|
| ೧. | ನಿಜಶರಣ ಅಂಬಿಗರ ಚೌಡಯ್ಯನವರ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ಗುಲಬರ್ಗಾ ವಿಶ್ವವಿದ್ಯಾಲಯದ ಮಹಾತ್ಮಗಾಂಧಿ ಸಭಾಂಗಣ | ೨೧.೦೧.೨೦೧೫ |
| ೨. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೧೬ |
| ೩. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಭವನ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೧೭ |
| ೪. | ನಿಜಶರಣ ಅಂಬಿಗರ ಚೌಡಯ್ಯ ವಾಙ್ಮಯ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಸಲಾಗಿದೆ.<br>ಸ್ಥಳ: ಶರಣ ಸಾಹಿತ್ಯ ಸಂಪನ್ಮೂಲ ಕೇಂದ್ರ ಬಸವಕಲ್ಯಾಣ | ೧೫.೦೯.೨೦೧೭ |
| ೫. | ಸಾಮಾಜಿಕ ಸೌಹಾರ್ದತೆಯೆಡೆಗೆ ಸಾಹಿತ್ಯ ರಾಷ್ಟ್ರೀಯ ಸಮ್ಮೇಳನದಲ್ಲಿ ಅಂಬಿಗರ ಚೌಡಯ್ಯನವರ ವಚನಗಳ ಗೋಷ್ಠಿಯಲ್ಲಿ ಚರ್ಚಿಸಲಾಯಿತು.<br>ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಭವನ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೭, ೮ ಹಾಗೂ ೯ ಡಿಸೆಂಬರ್ ೨೦೧೭ |
| ೬. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಸಮಾರಂಭ<br>ಸ್ಥಳ: ಮಹಾತ್ಮಾಗಾಂಧಿ ಸಭಾಂಗಣ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೧೮ |
| ೭. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೧೯ |
| ೮. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೨೦ |
| ೯. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೨೧ |
| ೧೦. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೨೨ |
| ೧೧. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೨೩ |
| ೧೨. | ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗಿದೆ.<br>ಸ್ಥಳ: ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ೨೧.೦೧.೨೦೨೪ |

### ೨೦೨೪-೨೫ ನೇ ಸಾಲಿನಲ್ಲಿ ಕೈಗೊಳ್ಳುವ ಕಾರ್ಯಕ್ರಗಳು


| | | |
|---|---|---|
| ೧. | ನಿಜಶರಣ ಅಂಬಿಗರ ಚೌಡಯ್ಯನವರ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಗುವುದು | ಏಪ್ರಿಲ್-೨೦೨೪ |
| ೨. | ನಿಜಶರಣ ಅಂಬಿಗರ ಚೌಡಯ್ಯನವರ ಕುರಿತು ರಾಜ್ಯಮಟ್ಟ ವಿಚಾರ ಸಂಕಿರಣ ಕಾರ್ಯಕ್ರಮ ನಡೆಸಲಾಗುವುದು | ಆಗಸ್ಟ್-೨೦೨೪ |
| ೩. | ನಿಜಶರಣ ಅಂಬಿಗರ ಚೌಡಯ್ಯನವರ ಜಯಂತ್ಯುತ್ಸವ ಕಾರ್ಯಕ್ರಮ ನಡೆಸಲಾಗುವುದು.<br>[illegible] ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. | ಜನೇವರಿ-೨೦೨೫ |

ನಿರ್ದೇಶಕರು
ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಅನುಬಂಧ-2

# ಅಂಬಿಗರ ಚೌಡಯ್ಯ
# ವಚನಗಳ ಪರಿಶೀಲನೆ


ಸಂಪಾದಕರು : ಪ್ರೊ. ಸೋಮಣ್ಣ
ಯತೀಶ್ ಕುದುಪು


ಅಂಬಿಗರ ಚೌಡಯ್ಯ ಅಧ್ಯಯನ ಪೀಠ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ



ಅಂಬಿಗರ ಚೌಡಯ್ಯ ವಚನಗಳ ಪರಿಶೀಲನೆ


ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ಮಂಗಳಗಂಗೋತ್ರಿ


ಬಡತನಕ್ಕೆ ಉಂಬುವ ಚಿಂತೆ
ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ
ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದಗೆ ಕೇಡಿನ ಚಿಂತೆ
ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯನ ನಿಜ ಶರಣನು


ಅಂಬಿಗರ ಚೌಡಯ್ಯ ಅಧ್ಯಯನ ಪೀಠ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

ಬೆಲೆ ರೂ. 160


ಮಂಗಳೂರು ವಿಶ್ವವಿದ್ಯಾನಿಲಯ
ಅಂಬಿಗರ ಚೌಡಯ್ಯ ಅಧ್ಯಯನ ಪೀಠ
ಮಂಗಳಗಂಗೋತ್ರಿ - 574199



# ‘ಕಡಲನ್ನು ಆಶ್ರಯಿಸಿ ಬದುಕುವ ಮೀನುಗಾರರ ಬದುಕಿನ ಅಧ್ಯಯನ ಅಗತ್ಯ’



ಮಂಗಳಗಂಗೋತ್ರಿ, ಡಿ. 14: ವಚನಕಾರರ ಮೌಲ್ಯವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗ ವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮಾನವ ಪ್ರೀತಿಯನ್ನು ಹೆಚ್ಚಿಸುತ್ತದೆ. ಕಡಲನ್ನು ಆಶ್ರಯಿಸಿ ಬದುಕುವ ಮೀನುಗಾರರ ಬದುಕಿನ ಅಧ್ಯಯನ ಮತ್ತು ದಾಖಲೀಕರಣ ಅಗತ್ಯವಾಗಿದೆ ಎಂದು ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲ ಪ್ರೊ। ಕೃಷ್ಣಮೂರ್ತಿ ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಅಂಬಿಗರ ಚೌಡಯ್ಯ ಅಧ್ಯಯನ ಪೀಠ ಮತ್ತು ಕನ್ನಡ ಸಂಘ, ವಿಶ್ವ ವಿದ್ಯಾನಿಲಯ ಕಾಲೇಜು ಹಂಪನಕಟ್ಟೆ ಸಹಯೋಗದೊಂದಿಗೆ ಡಾ। ಶಿವರಾಮಕಾರಂತ ಸಭಾಭವನದಲ್ಲಿ ಬುಧವಾರ ಆಯೋಜಿಸಿದ್ದ ಅಂಬಿಗರ ಚೌಡಯ್ಯನವರ ವಚನಗಳ ವಿದ್ಯಾರ್ಥಿ ಉಪನ್ಯಾಸ ಸ್ಪರ್ಧಾ ಕಾರ್ಯಕ್ರಮದ ಸಮಾರೋಪ ಅವರು ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಬದುಕಿನ ಸತ್ಯಗಳನ್ನು ನೇರವಾಗಿ ತಮ್ಮ ವಚನಗಳಲ್ಲಿ ಮನಸ್ಸಿಗೆ ನಾಟುವಂತೆ ನುಡಿದವರು ಅಂಬಿಗರ ಚೌಡಯ್ಯನವರು. ಅವರ ವಚನಗಳು ಸಮಾಜವನ್ನು ಎಚ್ಚರಿಸುತ್ತದೆ. ಗುರುಶಿಷ್ಯರ ಕುರಿತ ಅವರ ವಚನಗಳು ಇವತ್ತಿಗೂ ಪ್ರಸ್ತುತವಾಗಿದೆ ಪ್ರೊ। ಕೃಷ್ಣಮೂರ್ತಿ ಹೇಳಿದರು. ಉಪನ್ಯಾಸ ಸ್ಪರ್ಧಾ ಕಾರ್ಯಕ್ರಮದ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಥಮ ಸ್ಥಾನವನ್ನು ಗೋವಿಂದದಾಸ ಕಾಲೇಜು ಸುರತ್ಕಲ್‌ನ ವಿದ್ಯಾರ್ಥಿನಿ ಹಿತಾ ಉಮೇಶ್. ▣4



